4) ಕಳೆದ 2 ವರ್ಷಗಳಲ್ಲಿ ಸಂಸ್ಥೆಯಲ್ಲಿ 48 ಹವಾನಿಯಂತ್ರಿತ ವಾಹನಗಳನ್ನು ಪ್ರಮುಖ ಮಾರ್ಗಗಳ ಮೇಲೆ ಕಾರ್ಯಾಚರಣೆ ಮಾಡಲಾಗುತ್ತಿದೆ.

5) ರೂ. 5.00 ಕೋಟಿ ವೆಚ್ಚದಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ಧನ ಸಹಯೋಗದಿಂದ ಪ್ರಾದೇಶಿಕ ತರಬೇತಿ ಕೇಂದ್ರವನ್ನು ಹಗರಿಬೊಮ್ಮನಹಳ್ಳಿಯಲ್ಲಿ ನಿರ್ಮಿಸಲಾಗಿದೆ. ಈ ಕೇಂದ್ರದಲ್ಲಲಿ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.

6) ಯಾದಗೀರಿನಲ್ಲಿ ರೂ. 14.00 ಕೋಟಿ ವೆಚ್ಚದಲ್ಲಿ ಪ್ರಾದೇಶಿಕ ಕಾರ್ಯಾಗಾರವನ್ನು ನಿರ್ಮಿಸಲಾಗಿದೆ. ಈ ಕಾರ್ಯಾಗಾರವು ಸಧ್ಯಕ್ಕೆ ಪ್ರತಿ ವರ್ಷ 240 ಹೊಸ ವಾಹನಗಳನ್ನು ಹಾಗೂ 180 ವಾಹನಗಳನ್ನು ರಿಪೇರಿ ಮಾಡುವ ಸಾಮರ್ಥ್ಯವನ್ನು ಹೊಂದಿದೆ.

7) ಕಳೆದ ಎರಡು ವರ್ಷಗಳಲ್ಲಿ 2700 ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಇದರಿಂದ ಸಂಸ್ಥೆಯು ರದ್ಧತಿಯಿಲ್ಲದೆ ಅನುಸೂಚಿಗಳನ್ನು ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ಮಾಡಲು ಸಾಧ್ಯವಾಗಿದೆ.

8) ಪ್ರಯಾಣಿಕರು ತಮ್ಮ ಅಸನಗಳನ್ನು ಕಾಯ್ದಿರಿಸಲು ಅವತಾರ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಈ.ಕ.ರ.ಸಾ. ಸಂಸ್ಥೆಯಲ್ಲಿ ಡಾ.ನಂಜುಂಡಪ್ಪನವರ್ ವರದಿ ಆಧಾರದ ಮೇಲೆ ನೀಡಿದ ಅನುದಾನದಿಂದ ಹೊಸ ಬಸ್ ನಿಲ್ದಾಣಗಳು ಹಾಗೂ ಘಟಕಗಳನ್ನು ನಿರ್ಮಿಸಲು ಹಾಗೂ ಹಳೆಯ ಬಸ್ ನಿಲ್ದಾಣ ಹಾಗೂ ಘಟಕಗಳನ್ನು ಮೇಲ್ದಾರ್ಜೆಗೆರಿಸುವ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ಇದಲ್ಲದೆ ಸುಲಭ ಶೌಚಾಲಯಗಳು ಹಾಗೂ ತಂಗುದಾಣಗಳನ್ನು ಸಹ ನಿರ್ಮಿಸಲಾಗುತ್ತಿದೆ.

<u>ಕರ್ನಾಟಕ ವಿಧಾನಸಭೆ</u>
<u>13ನೇ ವಿಧಾನಸಭೆ</u>
<u>3ನೇ ಅಧಿವೇಶನ</u>

218 ಶ್ರೀ ಈಶ್ವರ ಭೀಮಣ್ಣ ಖಂಡ್ರೆ(ಭಾಲ್ಕಿ)
ಮಾನ್ಯ ಲೋಕೋಪಯೋಗಿ ಸಚಿವರು

ಅ) ಬೀದರ್ ಲೋಕೋಪಯೋಗಿ ವಿಭಾಗಕ್ಕೆ ಕಳೆದ 3 ವರ್ಷಗಳಲ್ಲಿ ಪ್ರತಿ ವರ್ಷ ಹೊಸ ರಸ್ತೆಗಳ ನಿರ್ಮಾಣ, ನಿರ್ವಹಣೆ ಅಭಿವೃದ್ಧಿ ಹಾಗೂ ಮೇಲ್ದರ್ಜೆಗೇರಿಸಲು ಎಷ್ಟು ಹಣವನ್ನು ನೀಡಲಾಗಿದೆ. ಪೂರ್ಣ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು.

ಬೀದರ್ ಲೋಕೋಪಯೋಗಿ ವಿಭಾಗಕ್ಕೆ ಕಳೆದ 3 ವರ್ಷಗಳಲ್ಲಿ ಪ್ರತಿ ವರ್ಷ ಹೊಸ ರಸ್ತೆಗಳ ನಿರ್ಮಾಣ, ನಿರ್ವಹಣೆ ಅಭಿವೃದ್ಧಿ ಹಾಗೂ

ಮೇಲ್ದರ್ಜೆಗೇರಿಸಲು ನೀಡಲಾದ ಹಣದ ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳನ್ನು ಅನುಬಂಧ–1ರಲ್ಲಿ ವಿವರಿಸಿದೆ.

ಆ) ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಎಷ್ಟು ಕಿಮೀ ರಸ್ತೆಗಳನ್ನು ಹೊಸದಾಗಿ ನಿರ್ಮಾಣ ಮಾಡಲಾಗಿದೆ. ಎಷ್ಟು ಕಿಮೀ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಹಾಗೂ ಎಷ್ಟು ಕಿಮೀ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಾಣ ಮಾಡಲಾದ, ಅಭಿವೃದ್ಧಿ ಪಡಿಸಲಾದ ಹಾಗೂ ಮೇಲ್ದರ್ಜೆಗೇರಿಸಲಾದ ವಿಧಾನಸಭಾ ಕ್ಷೇತ್ರಾವಾರು ವಿವರಗಳನ್ನು ಅನುಬಂಧ–2ರಲ್ಲಿ ವಿವರಿಸಿದೆ.

ಇ) ಈ ಪೈಕಿ ಯಾವ ಯಾವ ರಸ್ತೆಗಳು ಅಂತರ ರಾಜ್ಯ ಸಂಪರ್ಕ ಕಲ್ಪಿಸುತ್ತದೆ.

1. ಸಾವರಗಾಂವ –ಹಂಗರಗಾ ಬಾರ್ಡರ್ ರಸ್ತೆ ತಾ. ಔರಾದ
2. ಅಲಮಾಸಪೂರ ಕ್ರಾಸ್‌ನಿಂದ ಎ.ಪಿ. ಬಾರ್ಡರ ರಸ್ತೆ ತಾ, ಬೀದರ್,
3. ಖೇಡಾ ಬಾಲಗಾಂವ ರಸ್ತೆ ತಾ. ಔರಾದ.

ಈ) ಜಿಲ್ಲೆಯಲ್ಲಿ ಬಹುತೇಕ ರಸ್ತೆಗಳು ವಿಶೇಷವಾಗಿ ಅಂತರರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಾಗಿದ್ದು ಅಭಿವೃದ್ದಿಗಾಗಿ ಕೋಟ್ಯಾಂತರ ರೂ.ಗಳನ್ನು ವೆಚ್ಚ ಮಾಡಿದ್ದರೂ ಸಹ ನೀರೀಕ್ಷಿತ ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಕಾಮಗಾರಿಗಳು ನಡೆದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಕ್ರ.ಸಂ: ಇ ನಲ್ಲಿ ವಿವರಿಸಿದ ರಸ್ತೆಗಳು ಅಂತರರಾಜ್ಯಕ್ಕೆ ಸಂಪರ್ಕಿಸುವ ರಸ್ತೆಗಳಾಗಿರುತ್ತವೆ. ಆರ್ಥಿಕ ಇಲಾಖೆಯಿಂದ ಆಯವ್ಯಯದಲ್ಲಿ ವಿವಿಧ ಯೋಜನೆಗಳಡಿ ಒದಗಿಸಲಾಗುವ ಅನುದಾನಕ್ಕನುಗುಣವಾಗಿ ಸದರಿ ರಸ್ತೆಗಳ ಸುಧಾರಣೆ: ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದೆ.

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಮುಂಬರುವ ದಿನಗಳಲ್ಲಿ ಇದಕ್ಕೆ ಕಾರಣರಾದವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳುವುದು.

ಅಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ.

ವಿಧಾನ ಸಭಾ ಸದಸ್ಯರಾದ ಶ್ರೀ.ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ 218ರ ಅನುಬಂಧ–1

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಮತಕ್ಷೇತ್ರ	5054– ನಬಾರ್ಡ್			5054–ಇತರೆ ರಸ್ತೆ ನಿರ್ಮಾಣ			3054–ರಾಜ್ಯ ಹೆದ್ದಾರಿ ನಿರ್ವಹಣೆ			3054–ಜಿಲ್ಲಾ ಮುಖ್ಯ ರಸ್ತೆ			5054–ಸಿ.ಆರ್.ಎಫ್		
		2006–07	2007–08	2008–09	2006–07	2007–08	2008–09	2006–07	2007–08	2008–09	2006–07	2007–08	2008–09	2006–07	2007–08	2008–09
1	ಔರಾದ	305.00	120.00	–	9.44	15.02	22.50	–	–	30.90	67.15	30.00	143.12	–	–	120.00
2	ಭಾಲ್ಕಿ	253.35	140.00	–	–	13.55	6.00	–	–	17.10	22.72	30.00	63.20	–	–	–
3	ಬಸವಕಲ್ಯಾಣ	362.35	180.00	–	12.00	7.50		–	–	23.30	102.15	65.00	54.71	100.00	–	130.00
4	ಬೀದರ್	214.45	150.00	–	–	7.50		–	–	–	101.66	65.00	0.00	–	–	–
5	ಬೀದರ್ (ಉತ್ತರ)	0.00	00	–	–		12.75	–	–	12.10		0.00	68.00	–	–	–
6	ಬೀದರ್ (ದಕ್ಷಿಣ)	0.00	0.00	–	–		9.00	–	–	16.18		0.00	97.47	–	–	–
7	ಹಲಸೂರು	260.00	160.00	–	1.95	11.04	–	–	–	–	24.68	30.00	0.00	–	–	–
8	ಹುಮನಾಬಾದ	325.45	180.00	–	1.76	13.08	15.00	–	–	3.90	151.88	60.00	64.00	–	–	–

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ–218

ಅನುಬಂಧ–2

ಬೀದರ ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಾಣ ಮಾಡಿದ, ಅಭಿವೃದ್ಧಿ ಪಡಿಸಲಾದ ಹಾಗೂ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದದ ವಿವರಗಳು.

(ಉದ್ದ ಕಿಮೀ.ಗಳಲ್ಲಿ)

ಸಂ.	ಮತಕ್ಷೇತ್ರ	ಹೊಸದಾಗಿ ನಿರ್ಮಾಣ ಮಾಡಿದ ರಸ್ತೆ ಉದ್ದ	ಅಭಿವೃದ್ಧಿಪಡಿಸಿದ ರಸ್ತೆ ಉದ್ದ	ಮೇಲ್ದರ್ಜೆಗೇರಿಸಿದ ರಸ್ತೆ ಉದ್ದ		ಹೊಸದಾಗಿ ನಿರ್ಮಾಣ ಮಾಡಿದ ರಸ್ತೆ ಉದ್ದ	ಅಭಿವೃದ್ಧಿಪಡಿಸಿದ ರಸ್ತೆ ಉದ್ದ	ಮೇಲ್ದರ್ಜೆಗೇರಿಸಿದ ರಸ್ತೆ ಉದ್ದ		ಹೊಸದಾಗಿ ನಿರ್ಮಾಣ ಮಾಡಿದ ರಸ್ತೆ ಉದ್ದ	ಅಭಿವೃದ್ಧಿಪಡಿಸಿದ ರಸ್ತೆ ಉದ್ದ	ಮೇಲ್ದರ್ಜೆಗೇರಿಸಿದ ರಸ್ತೆ ಉದ್ದ	
				ಹಳ್ಳಿ ರಸ್ತೆಯಿಂದ ಜಿಲ್ಲಾ ಮುಖ್ಯ ರಸ್ತೆ	ಜಿಲ್ಲಾ ಮುಖ್ಯ ರಸ್ತೆಯಿಂದ ರಾಜ್ಯ ಹೆದ್ದಾರಿ			ಹಳ್ಳಿ ರಸ್ತೆಯಿಂದ ಜಿಲ್ಲಾ ಮುಖ್ಯ ರಸ್ತೆ	ಜಿಲ್ಲಾ ಮುಖ್ಯ ರಸ್ತೆಯಿಂದ ರಾಜ್ಯ ಹೆದ್ದಾರಿ			ಹಳ್ಳಿ ರಸ್ತೆಯಿಂದ ಜಿಲ್ಲಾ ಮುಖ್ಯ ರಸ್ತೆ	ಜಿಲ್ಲಾ ಮುಖ್ಯ ರಸ್ತೆಯಿಂದ ರಾಜ್ಯ ಹೆದ್ದಾರಿ
1	2	3	4	5	6	7	8	9	10	11	12	13	14
1	ಔರಾದ	17.40	18.00	–	–	10.25	4.40	–	94.00	–	11.40	45.70	–
		1 ಸೇತುವೆ											
2	ಭಾಲ್ಕಿ	13.20	–	–	–	3.80	13.03	–	26.50	–		–	–
3	ಬಸವಕಲ್ಯಾಣ	13.00	8.00	–	–	3.90	5.00	–	25.50	–	9.00	–	–
4	ಬೀದರ	19.55	–	50.00	–	9.80	3.00	–	45.30	–	4.70	29.80	–
5	ಹಲಸೂರ	16.20	6.00	10.00	–	18.50	6.00	–	4.70	–	–	–	–
		1 ಸೇತುವೆ											
6	ಹುಮನಾಬಾದ	17.25	6.00	36.00	–	17.50	12.00	–	14.60	–	4.00	–	–
		1 ಸೇತುವೆ											
	ಒಟ್ಟು	**96.60** **3 ಸೇತುವೆ**	**38.80**	**96.00**	**0.00**	**63.75**	**43.43**	**0.00**	**210.60**	**0.00**	**29.10**	**75.50**	**0.00**

ಮುಖ್ಯ ಇಂಜನೀಯರರಯ,
ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ